# ‘ಸಪ್ತಸಾಗರದಾಚೆಯೆಲ್ಲೋ...’

“ಎಲ್ಲಕ್ಕಿಂತ ಮುಖ್ಯವಾಗಿ, ನಾನು ನೋಡೋಕೆ ಅಷ್ಟೇನೂ ಚೆನ್ನಾಗಿಲ್ಲ!”

“ಯಾರು ಹೇಳ್ತಾರೆ ಹಾಗಂತಾ?”

“ಅಂಗೈ ಹುಣ್ಣಿಗೆ ಕನ್ನಡಿ ಬೇಕೇ? ನಂಗೊತ್ತು ನಾನೆಷ್ಟು ಚೆಂದ ಇದೀನಿ ಅಂತಾ! ಜೊತೆಗೆ ನಾನು ತುಂಬಾ ಮುಜುಗರದ ಆಸಾಮಿ!”

“ನೀನೇ ಹೇಳ್ಬೇಕು ಹಾಗಂತಾ! ಈವಾಗ ಆಡ್ತಾ ಇರೋದು ಬಿಟ್ರೆ ನೀನು ಅಷ್ಟೇನೂ ಮುಜುಗರದ ಆಸಾಮಿ ಅಂತೇನೂ ಅನಿಸೋಲ್ಲ”

“ನಾನು ಸಮುದ್ರದ ತಡಿಯಲ್ಲಿ ಹುಟ್ಟಿ ಬೆಳೆದಿದ್ದರೂ ನಂಗೆ ಈಜು ಬರೋಲ್ಲ!”

“ಯಾಕೆ? ಅದು ಅಪರಾಧವೇ?”

“ಏನು?”

“ಅದೇ–ಸಮುದ್ರದ ತಡಿಯಲ್ಲಿ ಹುಟ್ಟಿ, ಬೆಳೆದೂ ಈಜು ಕಲಿದೇ ಇರೋದು, ಅಪರಾಧವೇ?”

“ಹ್ಮ್! ಅದೆಲ್ಲ ನಂಗೊತ್ತಿಲ್ಲ. ಆದ್ರೆ ನನಗನಿಸುತ್ತೆ, it shows the lack of adventure... ಜೊತೆಗೆ, ಈಜು ಬರದ ನಾನು ಸಮುದ್ರದ ಮೇಲೆ ಬೋಟ್‌ನಲ್ಲಿ ಹೋಗ್ತಾ ಬಿರುಗಾಳಿ ಬಂದ್ರೆ ಆ ಹಳೆಯ ಕತೆಯ ಪಂಡಿತನಂತೆ ಸಮುದ್ರದಲ್ಲಿ ಮುಳುಗಿ ಸತ್ತರೆ?”

“ಓಹೋ! ಹಾಗಾದ್ರೆ ನಿನ್ನನ್ನ ನೀನು ಪಂಡಿತೋತ್ತಮ ಅಂದ್ಕೊಂಡ್‌ಬಿಟ್ಟಿದೀಯಾ?”

“ಇಲ್ಲ ಇಲ್ಲ! ಅದೂ ಒಂದು ಕಾರಣ ನೋಡು!”

“ಕಾರಣ? ಏನು? ಯಾವುದಕ್ಕೆ?”

“ಮ್! ನಾನು ಪಂಡಿತೋತ್ತಮ ಅಲ್ಲ, ಒಬ್ಬ ಸಾಮಾನ್ಯ ಹುಡುಗ. ನಮ್ಮ ಆಫೀಸಿನಲ್ಲಿರೋ ನನ್ನ ವಯಸ್ಸಿನ ಬೇರೆ ಹುಡುಗರ ತರಾ ನಾನು ಜಾಸ್ತಿಯೇನೂ ಓದಿಕೊಂಡಿಲ್ಲ, ನನ್ನ ಸಂಜೆ–ಕಾಲೇಜಿನ ಡಿಗ್ರಿ ಯಾವತ್ತಿಗೆ ಮುಗಿಯುತ್ತದೆಯೋ ಗೊತ್ತಿಲ್ಲ! ಹಾಗಾಗಿ ನಾನು ಪಂಡಿತೋತ್ತಮ ಅಲ್ಲ!”

“ಸರಿ, ಇದು ಕಾರಣ– ಯಾವುದಕ್ಕೆ?”

“ತಡೀ, ಕೊನೆಗೆ ಹೇಳ್ತೀನಿ, ಮೊದಲು ಇನ್ನಷ್ಟು ಕಾರಣಗಳಿವೆ, ಅವೆಲ್ಲವನ್ನೂ ಹೇಳಿಬಿಡ್ತೀನಿ...”

...

ಶನಿವಾರದ ಇಳಿಸಂಜೆ ರಾತ್ರಿಯಾಗುತ್ತಿತ್ತು. ಇನ್ನೂ ಸರಿಯಾಗಿ ಮುಂಗಾರುಮಳೆ ಸೋಕದ ಪಾಂಡಿಚೆರಿಯ ಸಮುದ್ರ ತೀರದಲ್ಲಿ ಅವರಿಬ್ಬರೂ ಬರೀಗಾಲಿನಲ್ಲಿ ನಡೆಯುತ್ತಿದ್ದರು. ಇವನು ಸಮುದ್ರದ ಅಲೆಗಳು ಬಂದು ಸೆಳೆದೊಯ್ಯುವಷ್ಟು ಹತ್ತಿರದಲ್ಲಿ ಅಲೆಗಳಗುಂಟ ನಡೆಯುತ್ತಿದ್ದರೆ, ಅವಳು ಇವನ ಎಡ ಪಕ್ಕಕ್ಕೆ, ತೀರದಂಚಿನಲ್ಲಿ ತನ್ನ ಜೀನ್ಸ್ ಪ್ಯಾಂಟಿನ ತೋಳುಗಳನ್ನು ಮೊಣಕಾಲುಗಳವರೆಗೂ ಮೇಲಕ್ಕೆತ್ತಿ ಮಡಿಸಿಕೊಂಡಿಕೊಂಡು, ಚೆಲ್ಲಿದ್ದ ಮರಳಿನ ಹಾಸಿನೊಳಕ್ಕೆ ತನ್ನ ಬಿಳೀ ಹಿಮ್ಮಡಿಗಳನ್ನು ಒತ್ತುತ್ತಾ ನಡೆಯುತ್ತಿದ್ದಳು. ಆಗೊಂದು ಈಗೊಂದು ಹಿರಿಯಲೆ ಅವಳ ಹೆಜ್ಜೆ ಗುರುತುಗಳವರೆಗೂ ಹಾಯ್ದು ಬಂದು ಅವನ್ನು ಅಲ್ಲಲ್ಲಿ ಅಳಿಸಿಹಾಕುತಿತ್ತು. ಸ್ವಲ್ಪವೇ ಬೆಚ್ಚಗಿದ್ದ ಸುಳಿಗಾಳಿ ಸಮುದ್ರದೆಡೆಯಿಂದ ಸಾಗಿಬಂದು ಎಲ್ಲ ಭೂಜೀವಿಗಳ ಮೈಯೊಳಗೆ ಬೆವರೂರಿಸಿ, ಮೈಮನವನ್ನೆಲ್ಲ ಅಂಟಂಟು ಮಾಡುತ್ತಿತ್ತು.

“ಸರಿ! ಮುಂದೆ ಹೇಳು!”

“ನನಗೆ ದುಡ್ಡು ಮಾಡಬೇಕೆಂಬ ಹಂಬಲ ಇಲ್ಲ!”

“ಏನು? ದುಡಿಯೋಕೆ ಮನಸಿಲ್ವಾ?”

“ಹಾಗಲ್ಲ! ಆದ್ರೆ, ದುಡಿಮೆಯ ಹಿಂದೆ ಬಿದ್ದು, ಇವತ್ತಿನ ಖುಷಿಯನ್ನೆಲ್ಲ ಒತ್ತೆಯಿಟ್ಟು, ಗಾಣದೆತ್ತಿನ ತರಾ ದುಡಿದು ಕಾರು ಬಂಗಲೆ ಮಾಡಿಕೊಳ್ಳೋಕೆ ನನಗಿಷ್ಟವಿಲ್ಲ!”

“ಇದನ್ನ ‘ಮಹತ್ವಾಕಾಂಕ್ಷೆಯ ಕೊರತೆ’ ಅಂತಾರೆ!”

“ಯಾರು?”

"ಅದೇ 'ಋಷಿಯನ್ನೆಲ್ಲ ಒತ್ತೆಯಿಟ್ಟು, ಗಾಣದೆತ್ತಿನ ತರಾ ದುಡಿಯೋರು!'. ಒಂದ್ವಿಷ್ಯಾ ಹೇಳು, ನಿಂಗೆ ಕಾರು ಮನೆ ಅಂತೆಲ್ಲ ಮಾಡೋಕೆ ಮನಸ್ಸಿಲ್ವೇ?"

"ಯಾಕಿಲ್ಲ! ಇದೆ, ಖಂಡಿತಾ ಇದೆ! ಅವೆಲ್ಲ ಕನಸುಗಳೂ ಇವೆ. ಆದ್ರೆ ನನ್ನ ಪರಿಧಿಯೊಳಗೆ ನಾನು ಅವೆಲ್ಲ ಕನಸುಗಳನ್ನೂ ಒಂದೊಂದಾಗಿ ನನಸು ಮಾಡಿಕೊಳ್ತಾ, ನನ್ನ ದುಡಿಮೆಯ, ಜೀವನದ ಪ್ರತಿಯೊಂದೂ ಕ್ಷಣವನ್ನೂ ಅನುಭವಿಸ್ತಾ ಬದುಕೋಕೆ ನನಗಿಷ್ಟ. ಅದನ್ನು ಬಿಟ್ಟು ಅವಡುಗಚ್ಚಿ ಎಲ್ಲ ಕನಸುಗಳನ್ನೂ ಒಟ್ಟಿಗೇ ನನಸು ಮಾಡಿಕೊಂಡೇ ಜೀವನ ಶುರುಮಾಡೋಣ ಅಂದುಕೊಂಡು, ನನ್ನ ಪರಿಧಿಯನ್ನು ಆಗಲಾರದಷ್ಟು ಹಿಗ್ಗಿಸಿಕೊಂಡು ದಿನ-ರಾತ್ರಿ ದುಡಿದು, ಎಲ್ಲ ಕನಸುಗಳೂ ನನಸಾಗುವ ವೇಳೆಗೆ ಉಸಿರು ಸಿಕ್ಕಿಸಿಕೊಂಡು ಸತ್ತುಬಿಡೋಕೆ ನನಗಿಷ್ಟವಿಲ್ಲ!"

"ಹ್ಹ ಹ್ಹ ಹಾ!!!" ಅವಳು ತನ್ನ ಹೊಟ್ಟೆ ಹಿಡಿದುಕೊಂಡು ಗಹಗಹಿಸಿ ನಕ್ಕಳು.

"ಏನಂತೀಯಾ?"

"ಪ್ರತೀ ವ್ಯಕ್ತಿಗೂ ಅವರದೇ ಆದ ಥಿಯರೀಸ್ ಇರುತ್ವೆ, ಜೀವನದೃಷ್ಟಿಯಿರುತ್ತೆ, ಅದನ್ನು ಆಯ್ಕೆ ಮಾಡಿಕೊಳ್ಳೋ ಸ್ವಾತಂತ್ರ್ಯ ಕೂಡಾ ಅವರಿಗಿರುತ್ತೆ!"

"ಸರಿ, ನಿನಗೇನನಿಸುತ್ತೆ?"

"ನನಗೆ? ಯಾಕೇ?" ಅವಳು ಇವನನ್ನು ಕಿರುಗಣ್ಣಿನಿಂದ ನೋಡಿದಳು.

"ಸುಮ್ನೆ ಕೇಳ್ತಾ ಇದೀನಿ, ನಿನ್ನ ಜೀವನದೃಷ್ಟಿ ಏನನ್ನುತ್ತೆ?"

"ಗೊತ್ತಿಲ್ಲ!"

"ಯಾಕೆ?"

"ಯಾಕೇಂದ್ರೆ ಏನು ಹೇಳಲಿ?" ಅವಳು ಯೋಚಿಸುವಂತೆ ಮುಖ ಮಾಡಿಕೊಂಡು ನುಡಿದಳು, "ನೀನು ಹೇಳಿದ್ದೇ ನನಗೂ ಸರಿ ಅನ್ಸುತ್ತೆ!"

ಇವನು ಮುಂದುವರೆಸಿದ, "ಎಲ್ರೂ ಕ್ರಿಕೆಟ್ಟು, ಫೂಟ್ಬಾಲ್ ಅಂತೆಲ್ಲ ಏನೇನೋ ಆಟ ಆಡ್ತಾರೆ. ನಿಂಗೆ ಗೊತ್ತಲ್ಲಾ ನೀನು ಕೂಡಾ ಈ ಆಫೀಸ್‌ಗೆ ಬಂದ ಮೇಲೆಯೇ ಟೇಬಲ್ ಟೆನಿಸ್ ಆಡೋದು ಕಲಿತು ಬಿಟ್ಟೆ. ನನಗೆ ಆಟಗಳು ಅಂದ್ರೆ ಅಲರ್ಜಿ. ಇದೂವರೆಗೂ ಯಾವ ಆಟವನ್ನೂ ಆಡಿಲ್ಲ ನಾನು."

"ಮ್!?"

"ನಂಗೆ ಪುಸ್ತಕಗಳೂಂದ್ರೆ ತುಂಬಾ ಇಷ್ಟ, ಸುಮ್ನೆ ಊರೂರು ಸುತ್ತೋದಿಷ್ಟ, ಈ ಪ್ರಪಂಚದ ಎಲ್ಲಾ ಭಾಷೆಗಳ ಪಿಚ್ಚರ್‌ಗಳನ್ನು ನೋಡಬೇಕು ಅನ್ನೋ ಗುರಿ ಇಟ್ಕೊಂಡಿದೀನಿ. ಮ್ಯೂಸಿಕ್ ಕೇಳೋಕೆ ತುಂಬಾ ಇಷ್ಟ. ಮಾತಾಡ್ತಾ ನಡೆಯೋಕೆ ನಂಗಿಷ್ಟ, ನಡೀತಾ ಮಾತಾಡೋಕೆ ನಂಗಿಷ್ಟ. ಕೆಲವು ಜನ ಹೇಳ್ತಾರೆ, ನಾನು ತುಂಬಾನೇ ಮಾತಾಡ್ತೀನಂತೆ, ಬಾಯಿಬಡುಕ ಅಂತೆ!"

"ಅವರು ತುಂಬಾನೇ ಒಪೀನಿಯನೇಟೆಡ್!"

"ಯಾರು?"

"ಅದೇ ನೀನು ಹೇಳಿದ 'ಕೆಲವು ಜನ'!" ಅವಳ ತಿಳಿಹಾಸ್ಯ ಇವನ ತಲೆಗೆ ತಲುಪಲಿಲ್ಲ.

ಅವಳು ಕೇಳಿದಳು, "ನಿಜವಾಗ್ಲೂ ಫ್ಯಾಮಿಲಿಯಿಂದ-ಕ್ಲೋಸ್ ಫ್ರೆಂಡ್ಸ್ ಸರ್ಕಲ್‌ನಿಂದ ಹೊರಗಡೆ ನಿನ್ನ ಬಗ್ಗೆ ಯಾರು ಏನಂದ್ಕೋತಾರೆ ಅಂತಾ ನೀನು ತಲೆ ಕೆಡುಸ್ಕೋತೀಯಾ?"

"ಇಲ್ಲ! ಆದ್ರೆ ಇದು ವಿಚಿತ್ರ ಅನ್ಸೋಲ್ವಾ? ಕೇವಲ ಸೋಷಿಯೋಪಾತಿಕ್ ಮೆನಿಯಾಕ್ಸ್ ಮಾತ್ರ ಬೇರೆಯವರು ತಮ್ಮ ಬಗ್ಗೆ ಏನಂದುಕೋತಾರೆ ಅನ್ನೋದರ ಬಗ್ಗೆ ತಲೆ ಕೆಡುಸ್ಕೋಳಲ್ಲ ಅಲ್ವಾ?"

"ಹಾಗಾದ್ರೆ ನೀನು ಸೋಷಿಯೋಪಾತಿಕ್ ಮೆನಿಯಾಕಾ?"

"ಇರಬಹುದು!"

"ಇಲ್ಲ ಅನ್ಸುತ್ತೆ!" ಇವನ ವಾದವನ್ನು ಅವಳು ಒಪ್ಪಲಿಲ್ಲ.

"ಹೌದು, ನಾನು ಸೋಷಿಯೋಪಾತಿಕ್ ಮೆನಿಯಾಕ್ ಆಗೋಕೆ ಸಾಧ್ಯವಿಲ್ಲ! ಅದಾಗೋಕೆ ನಾನು ಅಡ್ವೆಂಚರಸ್ ಆಗಿರಬೇಕು, ಅಪಾಯಗಳನ್ನೂ, ಬದಲಾವಣೆಗಳನ್ನೂ ಇಷ್ಟಪಡುವವನಾಗಿರಬೇಕು! ಅದೆಲ್ಲ ನಾನಲ್ಲ! ನಾನೊಬ್ಬ ಡಲ್, ಬೋರಿಂಗ್ ಆಸಾಮಿ!"

“ಸರಿ, ನೀನೊಬ್ಬ ‘ಅಡ್ವೆಂಚರಸ್ ಅಲ್ಲದ, ನೋಡೋಕೆ ಅಷ್ಟೇನೂ ಚೆನ್ನಾಗಿಲ್ಲದ, ಪಂಡಿತೋತ್ತಮನಲ್ಲದ, ದುಡ್ಡು ಮಾಡೋಕೆ ಇಷ್ಟವಿಲ್ಲದ, ‘ಮಹತ್ವಾಕಾಂಕ್ಷಿ’ಯಲ್ಲದ ಸೋಷಿಯೋಪಾತಿಕ್ ಮೆನಿಯಾಕ್ ಆಗಲಾರದ, ಡಲ್–ಬೋರಿಂಗ್ ಹುಡುಗ’ ಇಷ್ಟೇ ತಾನೇ ನೀನು ಹೇಳಿದ್ದು?”

“ಹೌದು, ಆದ್ರೆ,.. ಅದೆಲ್ಲ ಪೀಠಿಕೆಯಷ್ಟೇ!”

“ಪೀಠಿಕೇನಾ? ಏನಕ್ಕೆ?”

“ನಾನು ಈಗ ಕೇಳುವ ಪ್ರಶ್ನೆಗೆ!” ಅವಳು ಇವನ ಕಣ್ಣುಗಳನ್ನೇ ದಿಟ್ಟಿಸಿದಳು, ಇಬ್ಬರೂ ತಮ್ಮ ನಡಿಗೆ ನಿಲ್ಲಿಸಿ ಸಮುದ್ರಕ್ಕೆದುರಾಗಿ ನಿಂತರು.

“...ನನಗ್ಗೊತ್ತು ಇದು ತಪ್ಪು, ಈ ಪ್ರಶ್ನೆಯನ್ನ ಹೀಗೆಲ್ಲ ಇಲ್ಲಿ ಕೇಳಬಾರದು. ಅದರಲ್ಲೂ ಈವಾಗ ಕೇಳಿದ್ರೆ ನಿನ್ನನ್ನು ಇಕ್ಕಟ್ಟಿಗೆ, ನನ್ನೆಡೆಗಿನೊಂದು obligation ಗೆ ಸಿಕ್ಕಿಸಿದಂತಾಗುತ್ತದೆ ಅಂತೆಲ್ಲ ಗೊತ್ತು. ಆದ್ರೆ ಈವಾಗ, ಇಲ್ಲಿ ಇವತ್ತು ನಿನ್ನನ್ನು ಈ ಪ್ರಶ್ನೆ ಕೇಳದಿದ್ದರೆ ನನಗ್ಯಾಕೋ ನನ್ನೆಲ್ಲ ಅದೃಷ್ಟದ ಬಾಗಿಲೂ ಇವತ್ತಿಗೇ ಮುಚ್ಚಿಬಿಡುತ್ತದೆ ಅಂತಾ ಅನಿಸ್ತಾ ಇದೆ, ಅದಕ್ಕಾಗಿ ಕೇಳ್ತಾ ಇದೀನಿ... ‘ಹೇಳು ನೇಹಾ ನನ್ನ ಮದುವೆಯಾಗ್ತೀಯಾ?’”

ಸಮುದ್ರದ ಅಲೆಗಳು ಅವಳ ಉತ್ತರಕ್ಕೆ ತಮ್ಮ ಆರ್ಭಟವನ್ನು ಕಮ್ಮಿಮಾಡಿದಂತೆ ಅವರಿಬ್ಬರ ನಡುವೆ ತಟ್ಟನೆ ಮಾತು ನಿಂತು ಮೌನ ಆವರಿಸಿತು. ಅವಳು ಇವನ ಕಣ್ಣುಗಳಿಂದ ತನ್ನ ದೃಷ್ಟಿಯಿಳಿಸಿದಳು. ಅವನಂತೆಯೇ ತನ್ನ ಉತ್ತರಕ್ಕೆ ಕಾದಿದ್ದ ಸಮುದ್ರವನ್ನೂ, ದೂರದಲ್ಲಿ ಮಂಕು ಮಂಕಾಗುತ್ತಿದ್ದ ಸಮುದ್ರ–ಆಕಾಶದ ಗೆರೆಯನ್ನೂ, ವ್ಯತ್ಯಾಸವನ್ನೂ ಹಾಗೇ ದಿಟ್ಟಿಸಿದಳು.

ಅವಳ ಮುಖವನ್ನೇ ದಿಟ್ಟಿಸುತ್ತಿದ್ದ ಇವನಿಗೆ ಏನೂ ಗೊತ್ತಾಗಲಿಲ್ಲ. ಅವಳಿಗೆ ತನ್ನ ಪ್ರಶ್ನೆ ಅಚ್ಚರಿ ಮೂಡಿಸಿರಬಹುದಾ? ಅಥವಾ ಆಘಾತಕಾರಿ ಆಗಿರಬಹುದಾ? ಅಥವಾ ಎಲ್ಲಾ ಗೊತ್ತಿದ್ದೂ ಉತ್ತರ ಕೊಡೋಕೆ ಸತಾಯಿಸ್ತಿದಾಳಾ? ಅವಳ ಮುಖ ಯಾವುದೇ ಭಾವನೆಯನ್ನು ಓದಗೊಡುತ್ತಿರಲಿಲ್ಲ. ಅವಳು ಸಮುದ್ರದಿಂದ ದೃಷ್ಟಿ ಬದಲಿಸಿ ತನ್ನ ಕೈಬೆರಳುಗಳನ್ನೇ ನೋಡಿಕೊಂಡಳು. ಇವನು, ಅವಳು ತನ್ನ ಬೇರೆ–ಬೇರೆ ಕೈಬೆರಳುಗಳಲ್ಲಿ ‘ಆಯ್ತು’, ‘ಆಗಲ್ಲ’, ‘ಆಮೇಲೆ ಹೇಳ್ತೀನಿ’ ಅಂತೆಲ್ಲ ಹೆಸರಿಟ್ಟುಕೊಂಡು, ಕಣ್ಮುಚ್ಚಿ ಅವುಗಳಲ್ಲಿ ಒಂದನ್ನು ಮುಟ್ಟಿ ತನ್ನ ಪ್ರಶ್ನೆಗೆ ಉತ್ತರಿಸೋಕೆ ಪ್ರಯತ್ನ ಪಡ್ತಿದಾಳೇನೋ ಅಂದುಕೊಂಡ.

ಕೊನೆಗೂ ಭರ್ತಿ ನಾಲ್ಕು ನಿಮಿಷ ಆರು ಸೆಕೆಂಡ್‌ಗಳ ನಂತರ, ಮತ್ತೆ ಕತ್ತೆತ್ತಿ ಇವನ ಕಣ್ಣುಗಳನ್ನೇ ತನ್ನ ಚೂಪುಗಣ್ಣುಗಳಲ್ಲಿ ನೋಡುತ್ತ ನುಡಿದಳು. “ಇಲ್ಲ ಮನೋಜ್ಞ, ನಾನು ನಿನ್ನನ್ನು ಮದುವೆಯಾಗೋಕೆ ಆಗಲ್ಲ! ಯಾಕೇಂದ್ರೆ ನಾನು ಬೇರೆ ಯಾರನ್ನೋ ಪ್ರೀತಿಸ್ತಾ ಇದೀನಿ!”

...

ಅವಳ ಉತ್ತರಕ್ಕೆ ಕಾದು ತಮ್ಮ ಅಬ್ಬರ ಕಮ್ಮಿ ಮಾಡಿಕೊಂಡಿದ್ದ ಸಮುದ್ರದಲೆಗಳಿಗೆ ಈಗ ಏನು ಮಾಡಬೇಕು ಅಂತಾ ಗೊತ್ತಾಗಲಿಲ್ಲ–ವಾಪಸ್ಸು ತಾವು ಮೊದಲಿನಂತೆಯೇ ಏನೆಲ್ಲ ಆದರೂ ಏನೂ ಆಗಿಲ್ಲವೆಂಬಂತೆ ಅಬ್ಬರಿಸಿ ಆರ್ಭಟಿಸಬೇಕೇ ಅಥವಾ ದುಃಖದಿಂದ ಕಡಲೊಡಲೊಳಕ್ಕೆ ಹೊಕ್ಕು ತಲೆಮರೆಸಿಕೊಂಡು ಬರಿಯ ಸೋಕಿದ ಮರಳ ಬೋರೆಯ ಮೇಲೆ ಜೀವಜಲಕ್ಕಾಗಿ ವಿಲಿವಿಲಿಗುಟ್ಟುವ ಸಮುದ್ರದ ಜೀವಜಂತುಗಳನ್ನು ಸಾಯಬಿಡಬೇಕೇ? ಅಲೆಗಳು ಗೊಂದಲಕ್ಕೊಳಗಾದವು; ಬಿಸಿಗಾಳಿ ಕೂಡಾ ತನ್ನ ದಿಕ್ಕು ತಪ್ಪಿತು. ಅವಳ ಇದೊಂದು ಉತ್ತರದಿಂದ ಇವನಲ್ಲಿದ್ದ ಮಾತುಗಳೆಲ್ಲ ಕ್ಷಣಾರ್ಧದಲ್ಲಿ ಖಾಲಿಯಾದವು, ಗಂಟಲುಬ್ಬಿ ಬಂತು. ಇವನು ತನಗಾದ ಪರಿಸ್ಥಿತಿಯನ್ನು ಅವಳಿಗೆ ಗೊತ್ತು ಮಾಡಬಾರದೆಂದು, ಬಹು ಪ್ರಯಾಸದಿಂದ ಗಂಟಲು ಸರಿಮಾಡಿಕೊಳ್ಳುವಂತೆ ಹುಸಿಕೆಮ್ಮು ಕೆಮ್ಮಿದ. ಎದೆಯಾಳದೊಳಗಿನಿಂದ ಎದ್ದ ನೋವಿಗೆ ಪ್ರತಿಯಾಗಿ ಮಿದಳಿನಾಳದ ನರವ್ಯೂಹದ ಬೇರಿನಿಂದ ಹುಟ್ಟಿ, ತನ್ನ ಮಯ್ಯನ್ನೆಲ್ಲ ಹರಡಿಕೊಂಡ ಜಡತ್ವವನ್ನು ಅದರ ಹಿಂದೆ ಬಂದಪ್ಪಳಿಸಿದ ನಡುಕವನ್ನೂ ಏನೂ ಆಗಿಲ್ಲವೆಂಬಂತೆ ಸಹಿಸಿಕೊಂಡ. ಇಬ್ಬರಿಗೂ ಮುಂದೇನು ಮಾತನಾಡಬೇಕು, ಏನು ಮಾಡಬೇಕು ಅಂತಾ ಗೊತ್ತಾಗಲಿಲ್ಲ.

ಕೊನೆಗೆ ಅವಳೇ ನುಡಿದಳು, “ವಾಪಸ್ಸು ಹೋಗೋಣ್ವಾ?”

ಇವರೊಟ್ಟಿಗೆ ಬಂದಿದ್ದ ಸ್ನೇಹಿತರು ಇವರು ನಡೆದು ಬಂದ ತೀರದ ದೂರದಲ್ಲಿ ಸಣ್ಣ ಚುಕ್ಕಿಗಳಂತೆ ಕಾಣುತ್ತಿದ್ದರು. ಅವರಲ್ಲಿ ಕೆಲವರು ಆಗಲೇ ‘ಗುಂಡೋಪಂತ’ರಾಗಲು ‘ಗುಂಡೂರಾಯ’ರಾಗಲು ಪ್ರಯತ್ನ ನಡೆಸಿದ್ದರು; ಕೆಲವರು ಸಮುದ್ರದಲೆಗಳೊಂದಿಗೆ ಆಟವಾಡುತ್ತಿದ್ದರು; ಉಳಿದವರು ತೀರದಂಚಿನಲ್ಲಿ ಅಲೆಗಳು ತಾಕುವಲ್ಲಿ ಕುಳಿತು ಮಾತುಕತೆ ನಡೆಸಿದ್ದರು.

ಹಾಗೇ ವಾಪಸ್ಸು ನಡೆಯುತ್ತ, ಮಾತುಗಳೆಲ್ಲ ಮುಗಿದವನನ್ನು ಅವಳೇ ಮಾತಿಗೆಳೆದಳು...

“ನಾನು ಯಾರನ್ನ ಪ್ರೀತಿಸ್ತಾ ಇದೀನಿ ಅಂತಾ ಕೇಳೋಲ್ವಾ?”

“ಮ್...ಹ್ಮ್?” ಇವನಿಗಿನ್ನೂ ಮಾತು ಬಂದಿರಲಿಲ್ಲ.

"ಅಥ್ವಾ ತಿಳ್ಕೊಳ್ಳೋಕೆ ಇಷ್ಟ ಇಲ್ವಾ?"

"ಹಾಗಲ್ಲ ನೇಹಾ! ನಿನ್ನ ಪ್ರೀತಿ ಯಾರಿಗೆ ಸಿಕ್ಕರೂ ಅವನು ತುಂಬಾ ಅದೃಷ್ಟವಂತ ಬಿಡು!"

"ಸೋ?"

"ಸೋ, ಏನು?"

"ನಿನಗೆ ತಿಳ್ಕೋಳ್ಳೋಕೆ ಇಷ್ಟ ಇಲ್ಲ!?"

ಅವನು ನಿಟ್ಟುಸಿರು ಬಿಟ್ಟು ನುಡಿದ, "ಸರಿ, ಹೇಳು!"

"ಏನು?" ಅವಳು ಕೆಣಕುವಂತೆ ಕೇಳಿದಳು, ಅವನೆಡೆಗೆ ನೋಡಿ ನಕ್ಕಳು.

"ನೀನು ಯಾರನ್ನ ಪ್ರೀತಿಸ್ತಾ ಇದೀಯಾ?"

"ನಾನು ಪ್ರೀತಿಸ್ತಾ ಇರೋ ಹುಡುಗ ತುಂಬಾ ಯೂನಿಕ್!"

"ಅಂದ್ರೆ?" ಕೊನೆಗೂ ಅವಳೆಡೆಗೊಂದು ಕಿರುನಗುವಿನಂತದೊಂದನ್ನು ಬಿಸಾಕಲು ಇವನು ಸಮರ್ಥನಾದ.

"ತುಂಬಾ ಒಳ್ಳೇ ಹುಡುಗ! ಸ್ವಲ್ಪ ಸಂಕೋಚದ ಸ್ವಭಾವ ಬಿಟ್ರೆ ಎಲ್ಲಾದ್ರಲ್ಲೂ ಓಕೆ!"

"ನನಗೆ ಗೊತ್ತಾ?"

"ಏನು?"

"ನೀನು ಪ್ರೀತಿಸ್ತಿರೋ ಹುಡುಗ, ನನಗ್ಗೊತ್ತಾ?"

"ಹೂಂ...? ಹೂಂ! ಗೊತ್ತಿದೆ ಅಂದ್ರೆ ಗೊತ್ತಿದೆ, ಗೊತ್ತಿಲ್ಲಾ ಅಂದ್ರೆ ಗೊತ್ತಿಲ್ಲಾ!" ಅವಳ ಒಗಟನ್ನು ಒಡೆಯುವ ಗೋಜಿಗೆ ಹೋಗದೇ ಇವನು ಮೌನದಲ್ಲೇ ಮುಂದುವರೆದ, ಅವಳೀಗ ತನ್ನೆರಡೂ ಕೈಗಳನ್ನೂ ಅತ್ತಿಂದಿತ್ತ ತಿರುಗಿಸುತ್ತ, ಹಗುರವಾಗಿ ಅಲೆಗಳ ಮೇಲೆ ನಡೆಯುತ್ತ, ಲಹರಿಯಲ್ಲಿ ತನ್ನ ಮಾತು ಮುಂದುವರೆಸಿದಳು, "ಅವನಿಗೆ ತಾನೇನು ಅಂತಾ ಗೊತ್ತು, ತನಗೇನು ಬೇಕು ಅಂತಲೂ ಗೊತ್ತು! ಒಂಥರಾ ಸೈಲೆಂಟ್ ಅಚೀವರ್! ಮೌನಿಯಾದ್ರೂ ನನ್ನೊಂದಿಗೆ ಸಕ್ಕತ್ ಮಾತಾಡ್ತಾನೆ!"

"ನಮ್ಮ ಕಂಪನಿಯಲ್ಲೇ ಕೆಲ್ಸ ಮಾಡ್ತಾನಾ?"

"ಯಾರು?"

"ನೀನು ಪ್ರೀತಿಸೋ ಹುಡುಗ?"

"ಹೌದು!"

ಇವನಿಗೆ ತನ್ನ ಸಹೋದ್ಯೋಗಿ 'ಸಮಿತ್'ನ ನೆನಪಾಯಿತು. ತನ್ನ ಕಂಪನಿಗೆ ಹೊಸದಾಗಿ ಕೆಲಸಕ್ಕೆ ಸೇರಿದ್ದ ಅವಳನ್ನು ಇವನಿಗೆ ದೂರದಿಂದಲೇ ತೋರಿಸಿದವನೇ ಅವನು. ದಿನವಿಡೀ ಅವಳದೇ ಜಪ, ಆವಳ ಬಗ್ಗೆ ಇವನಿಗಿರುವ ಜ್ಞಾನವೆಲ್ಲ 'ಸಮಿತ್'ನಿಂದಲೇ ಬಂದಿದ್ದು! ಇದೆಲ್ಲವನ್ನೂ ತನಗೂ ಹೇಳಿಲ್ಲವಲ್ಲ ಅವನು!

"ಈಗ ನಮ್ಮೊಟ್ಟಿಗೆ ಈ ಟ್ರಿಪ್‌ಗೆ ಬಂದಿದ್ದಾನಾ?"

"...ಯಾರು?" ಅವಳ ಲಹರಿಯ ಸರಪಳಿ ತುಂಡಾದಂತಾಗಿ ತಟ್ಟನೆ ನಿಂತಳು.

"ನೀನು ಪ್ರೀತಿಸೋ ಹುಡುಗ?"

"ಹಾಂ?" ಅವಳು ಇವನ ಪ್ರಶ್ನೆ ಅರ್ಥವಾಗಲಿಲ್ಲವೆಂಬಂತೆ ಮುಖ ಮಾಡಿದಳು.

"ಈಗ ನಮ್ಮ ಜೊತೆ ಈ ಟ್ರಿಪ್‌ಗೆ ಬಂದಿದ್ದಾನಾ?"

"ಗೊತ್ತಿಲ್ಲ!"

ಇವನ ತಲೆ ಕೆಟ್ಟು ಹೋಯಿತು. ಇವನು ಈ ಪ್ರವಾಸಕ್ಕೆ ಬಂದಿರದ 'ಸಮಿತ್'ನನ್ನು ಬಿಟ್ಟು ಈ ಗುಂಪಿನ ಎಂಟು ಜನರಲ್ಲಿ ಯಾರು ಅವಳ ಪ್ರೀತಿಯ ಹುಡುಗ ಎಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳಲಾರಂಭಿಸಿದ. ಗುಂಪಿನ ಪ್ರತಿಯೊಬ್ಬ ಹುಡುಗನನ್ನೂ ತನ್ನ ಮನದ ಮೂಸೆಯಲ್ಲಿ ಇವಳೊಂದಿಗಿರಿಸಿ, 'ಥೇ ಇವನಿರ್ಲಿಕ್ಕಿಲ್ಲ' ಅಂದುಕೊಳ್ಳುತ್ತ ಹೋದ. ಕೊನೆಗೆ ತನ್ನನ್ನೂ ಸ್ವಲ್ಪ ಅವಳೊಂದಿಗಿರಿಸಿ ನೋಡಿದ, ಪರವಾ ಇಲ್ಲ ಅನಿಸಿತು. 'ಕನಕದಾಸ' ಪಿಚ್ಚರಿನ ಡೈಲಾಗಿನಂತೆ 'ನಾನು ಆದರೆ ಆಗಬಹುದು' ಎಂದೆನಿಸಿ ತನ್ನ ಮನದ ವ್ಯಾಪಾರದ ಬಗ್ಗೆ ಇವನಿಗೆ ನಗು ಬಂತು.

ಅವಳು ಕೇಳಿದಳು, "ಯಾಕೆ ನಗ್ತಾ ಇದೀಯಾ?"

"ಯಾಕೂ ಇಲ್ಲ..."

ಅವಳು ಸಪ್ಪೆ ಮುಖ ಮಾಡಿದಳು, "ಆದ್ರೆ ಏನು ಮಾಡೋದು? ನಾನು ಇದೂವರೆಗೂ ಅವನಿಗೆ ಈ ವಿಷಯ ಹೇಳೋಕೆ ಆಗಿಲ್ಲ"

"ಏನೂ?" ಇವನಿಗೆ ಅರ್ಥವಾಗಲಿಲ್ಲ.

"ಆದೇ, ನನ್ನ ಪ್ರೀತಿ ಕೂಡಾ ನಿನ್ನ ತರಾನೇ – ಒನ್ ವೇ!"

"ನೀನೇನೂ ವರಿ ಮಾಡ್ಕೋಬೇಕಾಗಿಲ್ಲ ಬಿಡು. ನೀನು ಯಾವ ಹುಡ್ಗನ್ನ ಇಷ್ಟ ಪಟ್ರೂ ಸರಿನೇ. 'ಇಲ್ಲ' ಅಂತಾ ಅನ್ನಿಸಿಕೊಳ್ಳೋ ಭಯವೇ ಬೇಡ!"

"ಆದ್ರೂ ಇವನೊಂಥರಾ ಬೇರೆ! ಎಲ್ಲ ಹುಡುಗರ ತರಾ ಅಲ್ಲ. ತಲೆಯೊಳಗೆ ಅಸಂಖ್ಯ, ಅಪರಿಮಿತ ಯೋಚನೆಗಳು, ಎಲ್ಲವನ್ನೂ ಮುಕ್ತವಾಗಿ ನೋಡೋ, ಎಲ್ಲದರ ಬಗ್ಗೆ ಮುಕ್ತವಾಗಿ ಯೋಚಿಸೋ ಆಸಾಮಿ. ಆದ್ರೆ ತನ್ನ ಬಗೆಗೇನೇ ಅವನಿಗೆ ತುಂಬಾ ಸಂಕುಚಿತ ಯೋಚನೆ. ತಾನು ಏನಕ್ಕೂ ಬಾರದ, ಎಲ್ಲಿಗೂ ಸೇರದ ಯಕಶ್ಚಿತ್ ಅಂದುಕೊಳ್ಳೋ ರೋಗಿಷ್ಟ!"

"ಹೌದಾ?" ಇವನಿಗೆ ಮತ್ತೇನು ಹೇಳಬೇಕೋ ತೋಚಲಿಲ್ಲ.

"ಬರೀ ಆರು ತಿಂಗಳು! ನಿನಗೆ ಆಶ್ಚರ್ಯ ಆಗಬಹುದು ಮನೋಜ್ಞ, ಅವನಿಗೂ ನನಗೂ ಪರಿಚಯವಾಗಿ ಬರೀ ಆರು ತಿಂಗಳಾಗಿವೆ ಅಷ್ಟೇ!" ನಮ್ಮಿಬ್ಬರ ಸ್ನೇಹಕ್ಕೂ ಬರೀ ಆರು ತಿಂಗಳಾಗಿವೆ ಎಂದುಕೊಂಡ ಇವನು; ಅವಳು ಮಾತು ಮುಂದುವರೆಸಿದಳು.

"...ಆದ್ರೇ ಅಷ್ಟರಲ್ಲೇ ಅವನು ತನ್ನ ಹೃದಯವನ್ನು ನನ್ನೆದುರು ತೆರೆದಿಟ್ಟ, ನನ್ನನ್ನೆಷ್ಟು ಪ್ರೀತಿಸ್ತಾನೆ ಅಂತಾ ತೋರಿಸಿಬಿಟ್ಟ. ಮಾತಿನಲ್ಲಿ ಕೇಳದಿದ್ದರೂ ತನಗೇನು ಬೇಕೂಂತ ತೋರಿಸಿಬಿಟ್ಟ, ನನಗೆ ತುಂಬಾ ಇಷ್ಟವಾಗಿಬಿಟ್ಟ. ತನ್ನ ಪರಿಚಯ ಆಗಿರ್ಲಿಲ್ಲ ಅಂದ್ರೆ ನಾನೇನು ಆಗ್ತಿದ್ನೋ ಅನ್ನೋ ಭಯ ಹುಟ್ಟಿಸಿಬಿಟ್ಟ."

"ಮ್...! ಆಮೇಲೆ?" ಇವನ ಮನಸು-ಮೈಯೊಳಗೆ ವಿಷಾದವೆಂಬುದು ನಿಧಾನ ವಿಷದಂತೆ ಏರಲಾರಂಭಿಸಿತು.

"...ಜೊತೆಗೆ ಆಕ್ಸಿಡೆಂಟ್ ಆದಾಗ ಅವನೇ ನನಗೆ ರಕ್ತ ಕೊಟ್ಟ, ನನ್ನ ರಕ್ತದೊಳಗೂ ಒಂದಾದ!"

ಇವನ ಹೃದಯ ಬಾಯಿಗೆ ಬಂತು. ಅವಳ ಎಡ ಪಕ್ಕದಲ್ಲಿ ಹೊಯ್ದಾಡುತ್ತಿದ್ದ ಸಾಗರ ತಟಸ್ಥವಾಯಿತು. ಬೀಸುತ್ತಿದ್ದ ಸಂಜೆಯ ಬೆಚ್ಚಗಿನ ಸುಳಿಗಾಳಿ ಸ್ತಬ್ದವಾಯ್ತು. ಇಡೀ ಕಾಲಚಕ್ರ ಥಟ್ಟನೆ ನಿಂತಂತಾಗಿ ನಡುಗಿ ಹೋದವನ ಉಸಿರು ಎದೆಯಲ್ಲಿ ಸಿಕ್ಕಿಕೊಂಡಿತು. ಇಬ್ಬರೂ ಸಮುದ್ರ ತೀರದ ದೀಪ-ಸ್ತಂಭಗಳಂತೆ ಒಬ್ಬರಿಗೊಬ್ಬರು ಇದಿರಾಗಿ ನಿಂತರು. ಅವಳೆಡೆಗೆ ನೋಡುತ್ತ ಯಾವುದೋ ಲೋಕದಲ್ಲಿರುವವನಂತೆ, ಅದೇ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿದ,

"ಹಾಗಾದ್ರೆ...?"

ಅವಳು ನಸುನಕ್ಕು ಹೂಂ ಎನ್ನುವಂತೆ ತಲೆಯಾಡಿಸಿದಳು.

"ಮ್...?" ಇವನಿಗೆ ತನ್ನ ಅದೃಷ್ಟದ ಬಗೆಗೇ ನಂಬಿಕೆ ಬಂದಿರಲಿಲ್ಲ!

ಅವಳು ಸ್ತಬ್ದಗೊಂಡು ನಿಂತಿದ್ದ ಸಾಗರಕ್ಕೆ ಬೆನ್ನುಹಾಕಿ, ಅವನೆಡೆಗೆ ತಿರುಗಿ ನಿಂತು ನಾಟಕೀಯವೆನಿಸುವಷ್ಟು ಸ್ಪಷ್ಟವಾಗಿ ನುಡಿದಳು, "ಹೌದು ಮನೋಜ್ಞ, ನಾನು ನಿನ್ನನ್ನು ಮದುವೆಯಾಗ್ತೀನಿ!"

ತಟಸ್ಥವಾಗಿದ್ದ ಸಾಗರ ಮತ್ತೆ ಹೊಯ್ದಾಡಲಾರಂಭಿಸಿ, ಸ್ತಬ್ದವಾಗಿದ್ದ ಗಾಳಿ ಮತ್ತೆ ತನ್ನ ಚಲನೆ ಆರಂಭಿಸಿತು. ನಿಂತಿದ್ದ ಕಾಲಚಕ್ರವೂ ಉರುಳಲಾರಂಭಿಸಿದಾಗ ಇವನು ನಿಂತು ಹೋಗಿದ್ದ ತನ್ನ ಹೃದಯವನ್ನು ಪುನಃಶ್ಚೇತನಗೊಳಿಸಲೋಸುಗ ತನ್ನೆದೆಯಲ್ಲಿ ಸಿಕ್ಕಿಕೊಂಡಿದ್ದ ಉಸಿರನ್ನು ದೊಡ್ಡದೊಂದು ನಿಟ್ಟುಸಿರಿನ ಮೂಲಕ ಹೊರಹಾಕಿದ; ಕಣ್ಣುಗಳಾಳದಲ್ಲಿ ಸಂತೋಷದ ಸುಳಿ ತಿರುಗಿ, ಕಣ್ಣಹನಿಯೊಂದು ಕಣ್ಣಂಚಿನಲ್ಲಿ ಕಾಣಿಸಿತು. ಇವನು ನಕ್ಕ-ಅವಳೂ ನಕ್ಕಳು. ಇವನು ತನ್ನ ಬಲಗೈ ಚಾಚಿದ-ಅವಳು ತನ್ನ ಬಲಗೈಯನ್ನು ಚಾಚಿದ ಕೈಯೊಳಗಿಟ್ಟಳು, ಇವನು ಅದನ್ನು ಮೆಲ್ಲನದುಮಿದ.

"ರಕ್ತವನ್ನೇನು? ಬೇರೆ ಯಾರಾದ್ರೂ ಕೊಡ್ತಿದ್ರು!"

ಕೈ-ಕೈ ಹಿಡಿದುಕೊಂಡು ಅವರಿಬ್ಬರೂ ನಡೆಯಲಾರಂಭಿಸಿದರು.

"ಅದೂ ನಿಜ! ಆದ್ರೆ ಅವ್ರೆಲ್ಲ ಕೊಟ್ಟಿದ್ದಿದ್ರೂ ನೀನು ಕೊಟ್ಟ ಹಾಗಾಗ್ತಿರ್ಲಿಲ್ವಲ್ಲಾ?"

"ಹಾಗಂದ್ರೆ?"

"ಹಾಗಂದ್ರೆ ಆದೇ! ಅಷ್ಟೊಂದು ಬೇಗ ಎಲ್ಲೂ ಸಿಗದ ನನ್ನ ಅತ್ಯಮೂಲ್ಯ ಓ ನೆಗೆಟಿವ್ ರಕ್ತ ಸಿಕ್ಕಿದ್ದು ನಿನ್ನಂತಹ ನೆಗೆಟಿವ್ ವ್ಯಕ್ತಿಯಲ್ಲೇ ತಾನೇ? ಅರ್ಧಗಂಟೆಯೊಳಗೆ ನೀನು ಬಂದು ರಕ್ತ ಕೊಡ್ತಿರ್ಲಿಲ್ಲ ಅಂದಿದ್ರೆ ನಾನು ಎಲ್ಲಿರ್ತಿದ್ದೆ?"

"ಹಾಗೆಲ್ಲ ಹೇಳಬೇಡ ನೇಹಾ! ನಿನಗೇನಾದ್ರೂ ಆಗಿದ್ದಿದ್ರೆ ನಾನು ಏನಾಗ್ತಿದ್ನೋ ನನಗೇ ಗೊತ್ತಿಲ್ಲ!"

"ನೀನು ನಿನ್ನ ಬಗ್ಗೆ ಇನ್ನೊಂದು ವಿಷಯ ಹೇಳಲೇ ಇಲ್ಲ!"

"ಏನು? ಯಾವಾಗ?"

"ಈ ಮೊದಲು ನಿನ್ನ ಲವ್ ಅಪ್ಲಿಕೇಷನ್ ಹಾಕುವಾಗ–ನೀನು ಸಕ್ಕತ್ 'ಸೆಂಟಿ' ಹುಡುಗ ಅಂತಾ?" ಅವಳ ತುಟಿಯಂಚಿನಲ್ಲಿ ಮತ್ತೊಂದು ಕಿರುನಗುವರಳುವುದರ ಜೊತೆಗೆ ಕಣ್ಣಂಚಿನಲ್ಲಿ ಒಂದು ಹನಿ ಫಳ್ಳೆಂದಿತು, "...ನೀನು ನನ್ನ ಜೀವ ಉಳಿಸಿದೀಯಾ ಮನು!"

"ನೀನೂ ನನ್ನ ಜೀವ ಉಳಿಸಿದ್ಯಲ್ಲಾ!"

ಅವಳು ಅಚ್ಚರಿಗೊಂಡು ಕೇಳಿದಳು, "ಏನು? ಯಾವಾಗ?"

"ಇವಾಗ! ನನ್ನ ಮದುವೆಯಾಗ್ತೀನಿ ಅಂತಾ ಹೇಳಿ?!"

"ಓಹೋ?" ಅವಳು ಇವನೆಡೆಗೆ ತಿರುಗಿ ನಿಂತು, ತನ್ನ ಬಲಗೆನ್ನೆಯ ಕುಳಿ ಮೂಡಿಸಿ, ಸಾವಿರದೊಂದನೆಯ ಬಾರಿಗೆ ಕಿರುನಕ್ಕಳು ಮತ್ತು ನುಡಿದಳು, "ಮೊದಲೇನೋ ಪರ್ವಾಗಿರ್ಲಿಲ್ಲ. ಈಗ ನಾನು ಕುರೂಪಿ, ನನ್ನನ್ನು ಈಗ ನಿನ್ನಂಥವನಲ್ಲದೇ ಬೇರೆ ಯಾರು ಪ್ರೀತಿಸ್ತಾರೆ? ಅದಕ್ಕೇ ಒಪ್ಪಿಕೊಂಡು ಬಿಟ್ಟೆ!"

"ಇಲ್ಲ ನೇಹಾ! ನೀನು ತಮಾಷೆ ಮಾಡ್ತಿದೀಯಾ! ಮೊದಲೆಲ್ಲ ನಿನ್ನ ನೋಡಿದಾಗ ಇವಳು ಇಷ್ಟೊಂದು ಪರ್ಫೆಕ್ಟ್ ಇದಾಳಲ್ಲಾ ಇವಳ ಸೌಂದರ್ಯವನ್ನ ಇನ್ಯಾವುದರಿಂದಲೂ ಹೆಚ್ಚಿಸಲು ಸಾಧ್ಯವೇ ಇಲ್ಲ ಅಂದ್ಕೊಂಡಿದ್ದೆ. ಆದರೆ ಈಗ ಈ ಕೊರತೆ ನಿನ್ನ ಸೌಂದರ್ಯವನ್ನು ಇನ್ನೂ ಹೆಚ್ಚಿಸಿದೆ"

ಅವಳು ಅವನನ್ನೇ ದಿಟ್ಟಿಸಿದಳು. ಅವನು ತನಗರಿವಿಲ್ಲದೇ ತನ್ನ ಎಡಗೈಯನ್ನು ಅವಳ ಕೆನ್ನೆ ಕುಳಿಯ ಮೇಲೆ ಮೇಲೆ ಹಾಗೇ ಆಡಿಸಿದ–ಹಾಗೆಯೇ ಅವಳ ಮೇಲ್ತುಟಿಯ ಮೇಲೆ ಆಗಿದ್ದ ಗೀರಿನ ಮೇಲೆ. ತನ್ನ ತುಟಿಯ ತಾಕುತ್ತಿದ್ದ ಅವನ ಬೆರಳುಗಳ ಕಂಪನ ಅವಳಿಗೆ ಗೊತ್ತಾಗಿ, ಅವಳ ಕೆನ್ನೆಯ ಕುಳಿ ಇನ್ನಷ್ಟು ದೊಡ್ಡದಾಯಿತು!

ಅವಳ ಕಣ್ಣುಗಳನ್ನೇ ನೋಡುತ್ತಾ ಅವನು ನಡುಗುವ ಧ್ವನಿಯಲ್ಲಿ ಮೆಲ್ಲನುಸುರಿದ, "ಒಂದ್ವಿಷ್ಯಾ ಹೇಳ್ಲಾ?"

ಅವಳು ಅವನ ಕಣ್ಣುಗಳನ್ನೇ ದಿಟ್ಟಿಸಿನೋಡುತ್ತಾ ಸಮ್ಮತಿಸಿದಳು "ಹೂಂ...?"

"ನಾನ್ಯಾವತ್ತೂ ನಿನ್ನ ಬಗ್ಗೆ ಹೀಗೆಲ್ಲ ಯೋಚಿಸಿರಲಿಲ್ಲ. ಆದ್ರೆ ಈ ಗೀರು ಮೂಡಿದ ಮೇಲೆಯೇ ನಿನ್ನ ತುಟಿಗಳು ಸಡನ್ನಾಗಿ ಸಕ್ಕತ್ ಕಿಸ್ಸೆಬಲ್ ಅಂತಾ ಅನ್ನಿಸಿದ್ವು."

"ಥೂ!! ದೊಡ್ಡ ಪರ್ವರ್ಟ್ ನೀನು!" ಅವಳ ತುಟಿಗಳ ಮೇಲಿನ ಕಿರುನಗೆ ಮಾಯವಾಗುತ್ತಿದ್ದಂತೆಯೇ ಅವಳ ಕೆನ್ನೆಯ ಕುಳಿ ಸಣ್ಣದಾಯಿತು. ಅವನು ಗಲಿಬಿಲಿಗೊಂಡು ನಾಲ್ಕು ತಿಂಗಳ ಹಿಂದೆ ಆದ ದ್ವಿಚಕ್ರ ವಾಹನ ಅಪಘಾತದ ಶಾಶ್ವತ ಕುರುಹಾದ ಅವಳ ಮೇಲ್ತುಟಿಯ ಮೇಲಿನ ಬಲವಾದ ಗೀರನ್ನು ನೇವರಿಸುತ್ತಿದ್ದ ತನ್ನ ತೋರುಬೆರಳನ್ನು ಮೆಲ್ಲನೇ ಮಡಿಸಿಕೊಂಡ. ಅವಳು ಫಕ್ಕನೇ ಅವನ ಆ ಕೈಯನ್ನು ಅಲ್ಲೇ ಹಿಡಿದುಕೊಂಡಳು, ಹಾಗೂ ಮೆಲ್ಲನೆ ಮುಂದಕ್ಕೆ ಬಾಗಿ ಕತ್ತೆತ್ತಿ, ಅವನ ತುಟಿಗಳನ್ನು ಚುಂಬಿಸಿದಳು ಮತ್ತು ಅವನ ಕಣ್ಣುಗಳಲ್ಲಿದ್ದ ಗೊಂದಲವನ್ನು ದೂರಮಾಡಿದಳು.

ದೂರದಲ್ಲಿ ಕುಡಿಯುತ್ತ–ತಿನ್ನುತ್ತ, ತಮ್ಮೊಳಗೇ ತಾವು ಮಾತನಾಡಿಕೊಳ್ಳುತ್ತ, ಜೊತೆಗೆ ಇವರೆಡೆಗೂ ಒಂದು ಕಣ್ಣಿಟ್ಟುಕೊಂಡೇ ಕುಳಿತಿದ್ದ ಬೆಂಗಳೂರಿನಿಂದ ವಾರಾಂತ್ಯದ ಪ್ರವಾಸಕ್ಕೆ ಇವರೊಟ್ಟಿಗೆ ಬಂದಿದ್ದ ಇವರ ಸ್ನೇಹಿತರ ಪೋಲಿ–ಪಟಾಲಮ್ಮಿನ ಹುಡುಗರು ಇವರನ್ನು ನೋಡಿ ಜೋರಾಗಿ ಸಿಳ್ಳೆ ಹಾಕಿದರು, ಹುಡುಗಿಯರು ಕೇಕೆ ಹಾಕಿದರು. ಅವರೆಲ್ಲರ ಗಲಾಟೆಯಿಂದ ಮುಖ ಕೆಂಪು ಮಾಡಿಕೊಳ್ಳುತ್ತಿದ್ದ ಅವನ ಕೊರಳ ಸುತ್ತ ತೋಳುಗಳ ಹಾರ ಹಾಕಿ ಮೆಲ್ಲನೆ ಹಿಂದಕ್ಕೆಳೆದುಕೊಳ್ಳುತ್ತಿದ್ದ ಅವನ ಮುಖವನ್ನು ಮತ್ತೆ ಹತ್ತಿರಕ್ಕೆಳೆದುಕೊಳ್ಳುತ್ತ ಅವಳು ತನ್ನ ತುಟಿಯ ಮೇಲಿನ ಗೀರಿಗೆ ಅವನ ಹತ್ತನೆಯದೋ ಹನ್ನೊಂದನೆಯದೋ ಮುತ್ತನ್ನು ಪಡೆದುಕೊಂಡಳು! ಇದೆಲ್ಲಕ್ಕೆ ಸಾಕ್ಷಿಯಾಗಿ ಅಲ್ಲೇ ಅನಂತಕ್ಕೆ ಚಾಚಿಕೊಂಡಿದ್ದ, ತನ್ನೊಳಗೆ ತಾನು ಹೊರಳಾಡುತ್ತಿದ್ದ ಸಾಗರದ ಹೃದಯದ ಮಿಡಿತ ನಾಗಾಲೋಟಕ್ಕೇರಿತು. ಅದರ ಢವಢವದ ಕುರುಹಾಗಿ, ಅಸಹನೀಯತೆಯ ಗುರುತಾಗಿ ಮರಳ ತೀರವನ್ನು ತಾಕುತ್ತಿದ್ದ ಅದರ ಅಲೆಗಳ ಅಬ್ಬರ ಹಟಾತ್ತನೇ ಹೆಚ್ಚಾಯಿತು; ಮತ್ತವಾಗಿದ್ದ ಪಾಂಡಿಚೆರಿಯ ಸಂಜೆ ಮೆತ್ತಗೆ ರಾತ್ರಿಯಾಯಿತು!

## ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.** shivuks@gmail.com

---

**ಈ ಬರಹದ 'ಸಂಭಾಷಣೆ'ಯ ಕೆಲ ಭಾಗ ನನ್ನ ಮೆಚ್ಚಿನ ಇಂಗ್ಲೀಷ್ ಲೇಖಕ 'ಡೀನ್ ಕೂಂಟ್ಸ್'ನ ಕಾದಂಬರಿ 'ಲೈಫ್ ಎಕ್ಸ್‌ಪೆಕ್ಟೆನ್ಸಿ'ಯಿಂದ ಎತ್ತಿದ್ದು!**